ಸರ್ಕಾರದ ಮುಖ್ಯ ಕಾರ್ಯದರ್ಶಿರವರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿರವರು, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಂಚಾಯತ್ ರಾಜ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ:27/04/2019ರಂದು ನಡೆದ ರಾಜ್ಯ ಮಟ್ಟದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಹಾಜರಾತಿ ಪಟ್ಟಿ ಲಗತ್ತಿಸಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ಹಾಗೂ ಜಿಲ್ಲಾ ಹಾಗೂ ಪ್ರಾಂತೀಯ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸುತ್ತಾ, ಪ್ರಾರಂಭದಲ್ಲಿ, ಗ್ರಾಮೀಣ ಕುಡಿಯುವ ನೀರಿನ ಪ್ರಗತಿ ಪರಿಶೀಲನೆ ಮಾಡಲಾಯಿತು. ತದನಂತರ, ಯೋಜನೆಗಳ ಅನುಷ್ಠಾನ, ನಿರ್ವಹಣೆ ಮತ್ತು ಬರ ಪರಿಸ್ಥಿತಿ ನಿರ್ವಹಿಸುವ ಕುರಿತಾದ ಸಮಸ್ಯೆಗಳು ಮತ್ತು ಕ್ರಮಗಳನ್ನು ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಂಡು ಅನುಪಾಲನೆಗೆ ನಿರ್ದೇಶಿಸಲಾಯಿತು.

- ಗ್ರಾಮೀಣ ಪ್ರದೇಶಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಜಾಗ್ರತೆಯಾಗಿ ಖಾಸಗಿ Borewellಗಳ ಸೇವೆಯನ್ನು ಪಡೆದುಕೊಳ್ಳಲು ಮೊದಲ ಆದ್ಯತೆ ನೀಡಬೇಕು. ಅನಿವಾರ್ಯವಿದ್ದಲ್ಲಿ ಮಾತ್ರ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಸಾಗಾಣಿಕೆ ಮುಖೇನ ನೀರು ಪೂರೈಸುವುದು ಮತ್ತು ಹೊಸ ಕೊಳವೆ ಬಾವಿಗಳನ್ನು ಕೊರೆಯುವಂತಹ ಪರಿಕ್ರಮಗಳನ್ನು ಅನುಸರಿಸಬೇಕು.
- ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ವಿದೇಯಕ-2003 ರಲ್ಲಿರುವ) ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಇದರಿಂದ ಖಾಸಗಿ Borewellಗಳ ಮೇಲಿನ ನಿಯಂತ್ರಣ ಸಾಧಿಸಬಹುದು. ತೀವ್ರ ಸಮಸ್ಯಾತ್ಮಕ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರಕಟಿಸಿರುವ (over exploited process) ಕಪ್ಪು ತಾಲ್ಲೂಕು, ಭೂದು ತಾಲ್ಲೂಕು ಮತ್ತು ಮಧ್ಯಂತರ ಕ್ಲಿಷ್ಟಕರ ತಾಲ್ಲೂಕುಗಳಲ್ಲಿ ಈ ಶಾಸನವನ್ನು ಜಾರಿಗೊಳಿಸುವುದು. ತತ್ಸಂಬಂಧ, ಯುಕ್ತ ಪ್ರಾಧಿಕಾರವು ಬಾವಿ ಮಾಲಿಕರಿಗೆ ಭೂ ಅರ್ಜನೆ ಅಧಿನಿಯಮ 1894ರ ಉಪಬಂಧಗಳ ಅನುಸಾರ ಮಾರುಕಟ್ಟೆ ಬೆಲೆಯ ಪ್ರಕಾರ ನಿರ್ಧರಿಸಲಾದಂತೆ ಪರಿಹಾರ ನೀಡಿಕೆ ಆದೇಶ ಹೊರಡಿಸುವುದು.
- ಜಿಲ್ಲಾಧಿಕಾರಿಗಳು ಮತ್ತು ZP, CEOಗಳು ಸಮನ್ವಯದಲ್ಲಿ 30ನೇ ಜೂನ್ 2019ರವರೆಗೆ ಕುಡಿಯುವ ನೀರಿನ ವಸ್ತುಸ್ಥಿತಿ, ಪರಿವೀಕ್ಷಿಸಿ ಪರಿಹಾರಗಳನ್ನು ಕುರಿತು ನಿರ್ಧಾರ ಕೈಗೊಂಡು ಯಾವುದೇ ಕಾರಣಕ್ಕೂ ಜನ ಜಾನುವಾರುಗಳ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
- ಈ ಸಲುವಾಗಿ ಪ್ರತಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಾಗೂ ಕುಡಿಯುವ ನೀರಿನ ಇಂಜಿನೀಯರಿಂಗ್ ವಿಭಾಗಗಳಲ್ಲಿ ಸಹಾಯವಾಣಿ ಕೇಂದ್ರಗಳು ಚುರುಕಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ತತ್ಸಂಬಂಧ ಗೊತ್ತುಪಡಿಸಿರುವ Call Centre Number: 18004258666

ಸಂಖ್ಯೆಯನ್ನು ಪ್ರಚುರಪಡಿಸಿ ಸದರಿ Call Centreನಲ್ಲಿ ದೂರು ಮತ್ತು ಕಾಲಮಿತಿಯೊಳಗೆ ಒದಗಿಸಲಾದ ಪರಿಹಾರ ಸಮರ್ಪಕವಾಗಿ ದಾಖಲಾಗುತ್ತಿರುವುದನ್ನು ಜವಾಬ್ದಾರಿಯಿಂದ ಪ್ರತಿನಿತ್ಯ ಸಂಬಂಧಿಸಿದ ಅಧಿಕಾರಿಗಳು ಪರಿವೀಕ್ಷಿಸಬೇಕು.

- ಸಾಗಾಣಿಕೆ ಮುಖೇನ ನೀರು ಪೂರೈಸಿದಾಗ ಅಕ್ರಮಗಳನ್ನು ತಡೆಯಲು, Trip ದಾಖಲಿಸಲು GPS Tracker ಕಡ್ಡಾಯವಾಗಿ ಅಳವಡಿಸತಕ್ಕದ್ದು. ಇದರ ಆಧಾರದ ಮೇಲೆ ನಿಯಮಾನುಸಾರ ಬಿಲ್ ಪಾವತಿಯಾಗಬೇಕು.
- ಜನ, ಜಾನುವಾರುಗಳ ಕುಡಿಯುವ ನೀರಿನ ವ್ಯವಸ್ಥೆಗಾಗಿ ಗ್ರಾಮೀಣ ನೀರು ಸರಬರಾಜು ಇಲಾಖೆಯಿಂದ ನೀಡಿರುವ ಅನುದಾನ ಮತ್ತು ಜಿಲ್ಲಾಧಿಕಾರಿಗಳಿಗೆ SDRF/NDRFನಡಿ ನೀಡಿರುವ ಅನುದಾನವನ್ನು ಕಾಲಮಿತಿಯೊಳಗೆ ಸರಿಯಾಗಿ ಬಳಸದಿರುವ ಕುರಿತು ಗಂಭೀರವಾಗಿ ಪರಿಶೀಲಿಸಿ, ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಕುಡಿಯುವ ನೀರಿನ ತುರ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆಧ್ಯತೆ ನೀಡಬೇಕು.
- **15ನೇ ಜೂನ್-2019ರ** ಅಂತ್ಯದವರೆಗೆ ಮಾತ್ರ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಜಾಗ್ರತೆಯಾಗಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು Tender ಪದ್ಧತಿಯಿಂದ ವಿನಾಯತಿ ನೀಡುವ ಕುರಿತು ಪರಿಶೀಲಿಸುತ್ತಿದ್ದು, 2-3ದಿನಗಳಲ್ಲಿ ಈ ಸಂಬಂಧ ಸೂಕ್ತ ಸುತ್ತೋಲೆ/ಆದೇಶ ಹೊರಡಿಸಲಾಗುವುದು.
- **2019-20ರ** ಸಾಲಿಗೆ ಈಗಾಗಲೇ ಹಿಂದಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮತ್ತು VCಯಲ್ಲಿ ತಿಳಿಸಿರುವ ರೀತ್ಯ ಸ್ಥಳೀಯ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ನಡೆಸಿ ಆಯಾ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮುಖೇನ ಜಿಲ್ಲಾ ಪಂಚಾಯತ್‌ಗಳಿಗೆ ಸಲ್ಲಿಸುವ ವಾಸ್ತವಿಕ ಕುಡಿಯುವ ನೀರಿನ ಬೇಡಿಕೆಯನ್ನು ಜಿಲ್ಲಾ ಮಟ್ಟದ ಕಾರ್ಯಪಾಲಕ ಇಂಜಿನೀಯರ್ RWS ಮತ್ತು Zp ಗಳು CEO ಖುದ್ದಾಗಿ ಪರಿಶೀಲಿಸಿ, ವಾರ್ಷಿಕ ಕ್ರಿಯಾ ಯೋಜನೆಯನ್ನು **ಜೂನ್-2019ರ ಮೊದಲ ವಾರದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕು.**
- ಕ್ರಿಯಾ ಯೋಜನೆ ಸಂಬಂಧ Pre & Post Monsoon ಕುಡಿಯುವ ನೀರಿನ ಗುಣಮಟ್ಟದ ಪರಿಶೀಲನೆ ಹಾಗೂ ನೀರು ಸರಬರಾಜು ಪ್ರಮಾಣ (LPCDಗಳಲ್ಲಿ) ಗಮನಿಸಿ NRDWP ಮಾನದಂಡಗಳನ್ವಯ <40LPCD ನೀರಿನ ಗುಣಮಟ್ಟದ ಸಮಸ್ಯೆಯಿರುವ ಜನ ವಸತಿಗಳು ಹಾಗೂ ಪ್ರಸಕ್ತ ಸಾಲಿನಲ್ಲಿ ಸಾಗಾಣಿಕೆ ಮುಖೇನ ನೀರು ಪಡೆಯುತ್ತಿರುವ ಗ್ರಾಮಗಳಿಗೆ ಮೊದಲ ಆದ್ಯತೆ ನೀಡಬೇಕು.
- ಮೇಲ್ಕಂಡ ಕ್ರಿಯಾ ಯೋಜನೆಯ ಮಾನದಂಡಗಳಿಗೆ ಪೂರಕವಾಗಿ ಕುಡಿಯುವ ನೀರಿನ ಇಂಜಿನೀಯರಿಂಗ್ ವಿಭಾಗದ ಅಧಿಕಾರಿಗಳು IMISನಲ್ಲಿ Yearly (YDU) Data Updation ಕಡ್ಡಾಯವಾಗಿ ಜವಾಬ್ದಾರಿಯಿಂದ ಮಾಡತಕ್ಕದ್ದು. ಈ ಸಮೀಕ್ಷಾ ವರದಿ ಅಂಕಿ ಅಂಶಗಳ ಆಧಾರದ ಮೇಲೆ ZP, CEOಗಳು ಯಾವ ಯೋಜನೆ ಅಳವಡಿಸಬೇಕೆಂದು ನಿರ್ಧಾರ ಕೈಗೊಳ್ಳಬೇಕು. ಈ

ಕುರಿತಂತೆ CE, RWSರವರು ನೀಡಿರುವ ಸೂಚನೆಗಳನ್ನು ಮತ್ತು ಆಯುಕ್ತರು ಕ್ರಿಯಾ ಯೋಜನೆ ತಯಾರಿಕೆ ಸಂಬಂಧ ನೀಡಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

- ಈ ಸಂಬಂಧ ಈ ಸಭೆಯ ವಿಷಯಸೂಚಿ ಟಿಪ್ಪಣಿಗಳಲ್ಲಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ Taskforce, SCP, TSP, SDP, MVS ಮತ್ತು WPPಗಳಿಗೆ ಸಂಬಂಧಿಸಿದಂತೆ ಈಗಾಗಲೇ ಮಾನದಂಡಗಳ ವಿವರಗಳನ್ನು ಒದಗಿಸಲಾಗಿದ್ದು, ಅದರನ್ವಯ ಯೋಜನೆಗಳನ್ನು/ಕಾಮಗಾರಿಗಳನ್ನು ಕ್ರಿಯಾಯೋಜನೆಯಡಿ ಅಳವಡಿಸುವಾಗ ಮಾರ್ಗಸೂಚಿಗಳನ್ನು ಸಮರ್ಪಕವಾಗಿ ಪಾಲಿಸತಕ್ಕದ್ದು.
- ನಿರುಪಯುಕ್ತವಾಗಿರುವ ಕುಡಿಯುವ ನೀರಿನ ಸ್ಥಾವರಗಳ GI Pipe, Cable, Pump House ಸಲಕರಣೆಗಳನ್ನು ಕಡ್ಡಾಯವಾಗಿ ಮರುಬಳಕೆ ಮಾಡಿಕೊಳ್ಳಲು ಕ್ರಮ ಕೈಗೊಳ್ಳತಕ್ಕದ್ದು. ಇದಲ್ಲದೆ, ಹೊಸ Pumpset ಅಳವಡಿಸುವಾಗ ಕಡಿಮೆ ಸಾಮರ್ಥ್ಯದ ಹಳೆಯ Pumpsetಗಳನ್ನು Buy back ವ್ಯವಸ್ಥೆಯಡಿ ಅಳವಡಿಸುವ ನಿಬಂಧನೆಗಳನ್ನು Tenderನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು.
- 2019-20ರ ಸಾಲಿನಲ್ಲಿ ಕಡಿಮೆ ಇಳುವರಿಯಿರುವ ಜಲಮೂಲಗಳು ಮತ್ತು ಬತ್ತಿ ಹೋಗಿರುವ ಕೊಳವೆ ಬಾವಿಗಳ ಸಮೀಪ ವೈಜ್ಞಾನಿಕ ತಳಹದಿಯಲ್ಲಿ ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ಕಡ್ಡಾಯವಾಗಿ ನರೇಗಾ ಕಾರ್ಯಕ್ರಮದಡಿ ಅಳವಡಿಸಿ, ಜಲ ಮೂಲಗಳನ್ನು ಪುನಶ್ಚೇತನಗೊಳಿಸಲು ಮೊದಲ ಆದ್ಯತೆ ನೀಡಬೇಕು.
- ಕುಡಿಯುವ ನೀರಿನ ಕ್ರಿಯಾ ಯೋಜನೆಗಳನ್ನು ರೂಪಿಸುವಾಗ Provisionally ಹಂಚಿಕೆ ಮಾಡಲಾದ ಕ್ರಿಯಾ ಯೋಜನೆ ಅನುದಾನ (MNP & NRDWP) SDP, SCP, TSP, TFC ಮತ್ತು 14ನೇ ಹಣಕಾಸು ಆಯೋಗದ ಅನುದಾನ ಹಾಗೂ MVS ಅನುದಾನ ಸೇರಿದಂತೆ, ನರೇಗಾ ಅನುದಾನ ಕ್ರೋಢೀಕರಿಸಿಕೊಂಡು ಸೂಕ್ತ ಯೋಜನೆಗಳನ್ನು ರೂಪಿಸಬೇಕು. ಒಂದೇ ಕಾಮಗಾರಿ ಯಾವುದೇ ಕಾರಣಕ್ಕೂ ಬೇರೆ ಬೇರೆ ಕಾರ್ಯಕ್ರಮದಡಿ ಪುನರಾವರ್ತನೆಯಾಗದಂತೆ ನೋಡಿಕೊಳ್ಳತಕ್ಕದ್ದು.
- 2019-20ನೇ ಸಾಲಿನಿಂದ ತುಂಡು ಗುತ್ತಿಗೆ ವ್ಯವಸ್ಥೆ ಕೈಬಿಟ್ಟು ಪಾರದರ್ಶಕವಾಗಿ Package ಮಾದರಿಯಲ್ಲಿ ತಾಲ್ಲೂಕು/ಜಿಲ್ಲಾವಾರು Tender ಕರೆದು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. **ಅಂತೆಯೇ ಇನ್ನು ಮುಂದೆ ತುಂಡು ಗುತ್ತಿಗೆ ಕಾಮಗಾರಿಗಳಿಗೆ ಅವಕಾಶವಿರುವುದಿಲ್ಲ.**
- ಇನ್ನು ಮುಂದೆ Borewell, Electrical, Civil ಇತ್ಯಾದಿ ಸಂಬಂಧಿಸಿದ ಕಾಮಗಾರಿಗಳು ಸೇರಿದಂತೆ ಒಂದೇ Tender ಮಾಡತಕ್ಕದ್ದು.
- ತುರ್ತು ನಿಮಿತ್ತ WPPಗಳ AMC KRRIDLಗೆ ನೀಡಿದ್ದು, ಪುನಃ ಈ ವ್ಯವಸ್ಥೆಯನ್ನೇ ಮುಂದುವರಿಸಲು ಅವಕಾಶವಿರುವುದಿಲ್ಲ. ಆದುದರಿಂದ ಜೂನ್-2019ರೊಳಗೆ Tender

ನಿಬಂಧನೆಗಳನ್ವಯ ಆಯಾ ಸರಬರಾಜು ಸಂಸ್ಥೆಗಳೊಂದಿಗೆ ಅಥವಾ ಅರ್ಹ ಸಂಸ್ಥೆಗಳೊಂದಿಗೆ AMC ಮಾಡಿಕೊಳ್ಳಲು ಜಿಲ್ಲಾ ಪಂಚಾಯತಿಗಳು ನಿಯಮಾನುಸಾರ ಕ್ರಮವಹಿಸಬೇಕು.

- Taskforceನಡಿ ಈಗಾಗಲೇ ತುರ್ತು ಕಾಮಗಾರಿಗಳ ಸಲುವಾಗಿ ನೀಡಲಾದ ಅನುದಾನವನ್ನು ಇನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವ ಜಿಲ್ಲಾ ಪಂಚಾಯತ್‌ಗಳ ಪ್ರಗತಿಯನ್ನು ಪರಿಶೀಲಿಸಿ ತಕ್ಷಣ ವಿಳಂಬ ಮಾಡದೇ ಕಾಮಗಾರಿಗಳನ್ನು ಚುರುಕುಗೊಳಿಸಿ ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಿ ವೆಚ್ಚ ಭರಿಸಲು ತಾಕೀತು ಮಾಡಲಾಯಿತು (ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಜೂನ್-2019ರೊಳಗೆ ವಿನಿಯೋಗಿಸಬೇಕು). ಉತ್ತರ ಕನ್ನಡ, ಗದಗ್, ಉಡುಪಿ, ಬೀದರ್, ಬಳ್ಳಾರಿ, ದಾವಣಗೆರೆ, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರು, ಚಿಕ್ಕೋಡಿ/ಬೆಳಗಾವಿ, ಧಾರವಾಡ, ಹಾಸನ, ಚಿತ್ರದುರ್ಗ, ಯಾದಗಿರಿ, ಹಾವೇರಿ ಜಿಲ್ಲಾ ಪಂಚಾಯತಿಗಳಿಗೆ 15 ದಿನದೊಳಗೆ ಕಾಮಗಾರಿ ಪೂರ್ಣಗೊಳಿಸಿ, Bill ಪಾವತಿಸಿ IMISನಲ್ಲಿ ವೆಚ್ಚ ದಾಖಲಿಸತಕ್ಕದ್ದು.
- ರಾಯಚೂರು, ಬೆಂಗಳೂರು ಗ್ರಾಮಾಂತರ ಮತ್ತು ಕೊಪ್ಪಳ ಜಿಲ್ಲಾ ಪಂಚಾಯತಿಗಳಿಗೆ ತುರ್ತು ಗ್ರಾನೀಸ ಕಾಮಗಾರಿಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಬೇಕು.
- ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳ ಬಹು (MVS) ಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಅಗತ್ಯವಿರುವ ಅರಣ್ಯ ಇಲಾಖೆ ಮತ್ತು ಜನಸಂಪನ್ಮೂಲ ಇಲಾಖಾ ಸಹಮತಿಯನ್ನು ಜಾಗ್ರತೆ ದೊರಕಿಸಿಕೊಡಲು ಕ್ರಮವಹಿಸುವುದು.
- ದಾವಣಗೆರೆ ಜಿಲ್ಲಾ ಪಂಚಾಯತಿ, ಹರಪ್ಪನಹಳ್ಳಿ ಜನವಸತಿಗಳು ಸೇರಿದಂತೆ ಸದರಿ ಇಂಜಿನೀಯರಿಂಗ್ ವಿಭಾಗದ ಕಾಮಗಾರಿಗಳನ್ನು ಸಹ ಪೂರ್ಣಗೊಳಿಸಿ, ನಂತರ ಹರಪ್ಪನ ಹಳ್ಳಿ ಇಂಜಿನೀಯರಿಂಗ್ ವಿಭಾಗಕ್ಕೆ ನಿರ್ವಹಣೆಗೆ ಮಾತ್ರ ಬಳ್ಳಾರಿ ಜಿಲ್ಲಾ ಪಂಚಾಯತಿ ಮುಖೇನ ಜವಾಬ್ದಾರಿ ವಹಿಸಬೇಕು.
- ಹಾಸನ ಜಿಲ್ಲೆ ಅರಸೀಕೆರೆ MVS ಯೋಜನೆ ದಿನಾಂಕ: 01/06/2019ರಿಂದ ಕಾರ್ಯಾರಂಭವಾಗತಕ್ಕದ್ದು. ಇದರಲ್ಲಿ ಯಾವುದೇ ರೀತಿಯ ವಿಳಂಬ ಸಲ್ಲದು.
- ವಿಜಾಪುರ ಮತ್ತು ಸಂಬಂಧಪಟ್ಟ ಇತರೆ ಜಿಲ್ಲಾ ಪಂಚಾಯತಿಗಳ Tankerಗಳ ಸಂಖ್ಯೆಗಳನ್ನು ಕಡಿಮೆ ಮಾಡಿ ಖಾಸಗಿ Borewellಗಳ ಸ್ವಾಧೀನಕ್ಕೆ ತಕ್ಷಣ ಕ್ರಮವಹಿಸಲು ತಿಳಿಸಲಾಯಿತು. ಅದರಂತೆ ಉಳಿದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಂದುವರಿದ ಕಾಮಗಾರಿಗಳನ್ನು ಮತ್ತು Taskforceನಡಿ ಅನುಮೋದನೆಯಾಗಿ ಕೈಗೆತ್ತಿಕೊಂಡಿರುವ ಎಲ್ಲಾ ಕಾಮಗಾರಿಗಳನ್ನು ಜಾಗ್ರತೆಯಾಗಿ ಪೂರ್ಣಗೊಳಿಸಿ, ಕುಡಿಯುವ ನೀರಿನ ವ್ಯವಸ್ಥೆಮಾಡಿ ಸಾಗಾಣಿಕೆ ಮುಖೇನ ನೀರು ಪೂರೈಕೆ ಮಾಡುವ ಹಳ್ಳಿಗಳನ್ನು ಕಡಿಮೆ ಮಾಡಬೇಕು.
- ಇನ್ನು ಮುಂದೆ ಡ್ಯಾಂಗಳಿಂದ ಮತ್ತು ನೈಸರ್ಗಿಕವಾಗಿ ಹರಿಯುವ ನದಿ ಜಲಧಾರೆಗಳಿಂದ ನೇರವಾಗಿ ಕೊಳವೆಗಳ ಮುಖೇನ ಕುಡಿಯುವ ನೀರಿನ ಬೇಡಿಕೆಗೆ ಪೂರಕವಾಗಿ ನೀರನ್ನು WPPಗಳಿಗೆ ತಲುಪಿಸಲು ತಾಂತ್ರಿಕವಾಗಿ ಕಾರ್ಯಸಿಂಧುತ್ವವಿರುವ ಗರಿಷ್ಠ ಮಿತವ್ಯಯ ಆಧಾರಿತ ಯೋಜನೆಗಳನ್ನು ರೂಪಿಸಲು ಪರಿಶೀಲಿಸಬೇಕು.

- ಬೆಳಗಾವಿ ಜಿಲ್ಲೆಯಲ್ಲಿ ಪೂರ್ಣಗೊಳ್ಳುವ ಹಂತದಲ್ಲಿರುವ 2 ಕಾಮಗಾರಿಗಳನ್ನು ಮೇ-2019ರೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸತಕ್ಕದ್ದು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಇಂಜಿನೀಯರ್ ಅಗತ್ಯ ಕ್ರಮ ಕೈಗೊಳ್ಳಬೇಕು. ಇದನ್ನು CE, RWS ಹಿಂಬಾಲಿಸಬೇಕು.
- ಪ್ರತಿ ತಿಂಗಳೂ ZP, CEOಗಳು ಶಾಶ್ವತ ಪರಿಹಾರ ಸಲುವಾಗಿ ಅಧಿಕ ಬಂಡವಾಳದಲ್ಲಿ ಮಂಜೂರಾಗಿರುವ MVS ಯೋಜನೆಗಳ ಪ್ರಗತಿ ಹಾಗೂ ಆರ್ಥಿಕ ಮತ್ತು ಭೌತಿಕ ವಿವರಗಳನ್ನು ಖುದ್ದಾಗಿ ಪರಿಶೀಲಿಸಿ, ಕಾಲಮಿತಿಯೊಳಗೆ ಅನುಮೋದನೆಯಾದ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಯೋಜನೆಗಳು ಪೂರ್ಣಗೊಂಡು ಫಲಪ್ರದವಾಗುವಂತೆ ನೋಡಿಕೊಳ್ಳತಕ್ಕದ್ದು.
- 92 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು 2019-20ರಲ್ಲಿ ಪೂರ್ಣಗೊಳಿಸಲು ವೇಳಾ (Bar Chart) ಪಟ್ಟಿ ಸಿದ್ಧಪಡಿಸಿಕೊಂಡು ಪ್ರಗತಿ ತೀವ್ರಗೊಳಿಸಬೇಕು. KUWSDB ವತಿಯಿಂದ ಅನುಷ್ಠಾನಗೊಳಿಸುತ್ತಿರುವ Enroute Villages Coverage ಕಾಮಗಾರಿ (ಕೋಲಾರ್‌ನ ಎರಗೋಳು ಮತ್ತು ಆಸುಪಾಸಿನ ಹಳ್ಳಿಗಳು, ಬೀದರ್‌ನ ಕಾರಂಜಿ ಜಲಾಶಯದಿಂದ ಬಾಲ್ಕಿ ತಾಲ್ಲೂಕುಗಳು) ಸೇರಿದಂತೆ ಜಾಗ್ರತೆಯಾಗಿ Treated Water Raising Mainಯಿಂದ ಗ್ರಾಮಗಳ ಸಂಪರ್ಕದ ಪೈಪ್‌ಲೈನ್ ಕಾಮಗಾರಿಯ ಅಂದಾಜು ಪಟ್ಟಿ ಸಿದ್ಧಪಡಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಬೇಕು.
- ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಗತಿಯನ್ನು ತೀವ್ರಗೊಳಿಸಿ, ಯೋಜನೆ ಕಾರ್ಯಗತಗೊಳಿಸಲು ಆದ್ಯತೆ ನೀಡಬೇಕು. ಈ ಸಲುವಾಗಿ ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ Contempt Petition ದಾಖಲಾಗಿದ್ದು, 2014-15ರಲ್ಲಿ ರಾಜ್ಯ ಸರ್ಕಾರ ಕಾಲಮಿತಿಯೊಳಗೆ ಯೋಜನೆ ಅನುಷ್ಠಾನಗೊಳಿಸಿ ಕಾರ್ಯಗತಗೊಳಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿರುವುದರಿಂದ ಈ ಯೋಜನೆ ಅನುಷ್ಠಾನದಲ್ಲಿ ಯಾವುದೇ ರೀತಿಯ ವಿಳಂಬ ಸಲ್ಲದು.
- SDP ಅನುದಾನ MVS ಯೋಜನೆಗೆ ವಿನಿಯೋಗವಾಗುವಂತೆ ಅನುದಾನ ಹಂಚಿಕೆ ಮಾಡಿಕೊಂಡು ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಆದ್ಯತೆ ನೀಡಬೇಕು.
- **15ನೇ ಜೂನ್ 2019ರೊಳಗೆ** DWSM/ZP ಅನುಮೋದನೆಯೊಂದಿಗೆ RWS ಕ್ರಿಯಾ ಯೋಜನೆ ಸರ್ಕಾರಕ್ಕೆ ತಲುಪಬೇಕು.
- 31000 ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ತಿಳಿಸಿ IMISನಲ್ಲಿ ದಾಖಲಿಸದಿರುವ ಉಳಿದ ಎಲ್ಲಾ ಕಾಮಗಾರಿಗಳನ್ನು ಕಡ್ಡಾಯವಾಗಿ ದಾಖಲಿಸಬೇಕು. **ಮೇ-2019ರ ಅಂತ್ಯಕ್ಕೆ ಈಗಾಗಲೇ ಆರಂಭವಾಗಿರುವ <ರೂ.5ಲಕ್ಷ ಮತ್ತು >ರೂ.5ಲಕ್ಷ ಮೊತ್ತದ ಎಲ್ಲಾ** (ತಾಂತ್ರಿಕ/ವಿಶೇಷ ಕಾರಣಗಳಿಂದ ಹೊರತುಪಡಿಸಬಹುದಾದ ಬೃಹತ್ ಯೋಜನೆಗಳನ್ನು ಹೊರತುಪಡಿಸಿ) ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು.
- ಒಂದು ವೇಳೆ Taskforce ಸೇರಿದಂತೆ ಯಾವುದೇ ಕಾಮಗಾರಿಯನ್ನು ಇನ್ನೂ ಪ್ರಾರಂಭಿಸದಿದ್ದಲ್ಲಿ/ಕಾರ್ಯಾದೇಶ ನೀಡದಿದ್ದಲ್ಲಿ ಅಂತಹ ಎಲ್ಲಾ ಕಾಮಗಾರಿಗಳನ್ನು ರದ್ದುಗೊಳಿಸಿ,

2019–20ರ ಸಾಲಿನಲ್ಲಿ ವಾಸ್ತವಿಕ ಅಗತ್ಯತೆ ಆಧರಿಸಿ ಹೊಸ ಕಾಮಗಾರಿಯಾಗಿ ಅಳವಡಿಸಲು ಕ್ರಮ ಕೈಗೊಳ್ಳತಕ್ಕದ್ದು. ಇಲ್ಲವಾದಲ್ಲಿ, ಸದರಿ ಕಾಮಗಾರಿಗಳಿಗೆ ಮುಂದುವರಿದ ಕಾಮಗಾರಿಗಳಾಗಿ 2019–20ರ ಸಾಲಿಗೆ ಅನುಮತಿ ದೊರಕುವುದಿಲ್ಲ ಮತ್ತು ಅನುದಾನವು ಲಭ್ಯವಾಗುವುದಿಲ್ಲ.

ಸ್ವಚ್ಛ ಭಾರತ್ ಮಿಷನ್ (SBM-G):

- 'ಸ್ವಚ್ಛ ಮೇವ ಜಯತೇ' ಆಂದೋಲನದ ಕಾರ್ಯತಂತ್ರ ಕುರಿತಂತೆ ಈಗಾಗಲೇ ಸರ್ಕಾರವು ನೀಡಿರುವ ವೇಳಾಪಟ್ಟಿ ಪ್ರಕಾರ ದಿನಾಂಕ: 30/04/2019ರಂದು ವಿವಿಧ ಅಭಿವೃದ್ಧಿ ಇಲಾಖಾ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಬೇಕು. 'ವಿಶ್ವ ಪರಿಸರ ದಿನ' ದಿನಾಂಕ:05/06/2019ರಂದು ರಾಜ್ಯ ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ ಆಂದೋಲನಕ್ಕೆ ಚಾಲನೆ ನೀಡುವುದು. ಆಂದೋಲನದ ಸಮಾರೋಪ ದಿನಾಂಕ:30/06/2019ರಂದು ಆಗಬೇಕು.
- 'ಸ್ವಚ್ಛ ಮೇವ ಜಯತೇ' ಆಂದೋಲನದ ಕಾರ್ಯಕ್ರಮದಲ್ಲಿ ರೇಡಿಯೋ, ಟಿ.ವಿ, ಪತ್ರಿಕೆ/ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ, ಬಸ್/ರೈಲ್ವೇ ನಿಲ್ದಾಣಗಳು, ಸಿನೇಮಾ ಮಂದಿರಗಳಲ್ಲಿ ದೃಶ್ಯ–ಶ್ರಾವ್ಯ ಪ್ರಚಾರ, ಸ್ವಚ್ಛತಾ ರಥ ಆಯೋಜನೆ, ಶೌಚಾಲಯ ಬಳಕೆ ಅಭಿಯಾನ, ಪ್ರತಿ ಗ್ರಾಮದಲ್ಲಿ ಗೋಡೆ ಬರಹ, ಪ್ರಬಂಧ ಸ್ಪರ್ಧೆ, ಪೋಸ್ಟರ್ ಮುದ್ರಣ–ಹಂಚಿಕೆ, ಕೈತೊಳೆಯುವ ಅಭಿಯಾನ, ತರಬೇತಿ ಕಾರ್ಯಕ್ರಮಗಳ ಆಯೋಜನೆ, ಇನ್ನಿತರ ಸೃಜನಾತ್ಮಕ IEC ಚಟುವಟಿಕೆಗಳನ್ನು ನಡೆಸುವುದು.
- ಸ್ವಚ್ಛ ಮೇವ ಜಯತೇ ಆಂದೋಲನದ ಚಟುವಟಿಕೆಗಳನ್ನು ಗೋಡೆ ಬರಹ, ಸ್ವಚ್ಛತಾ ರಥ, ಎಲ್ಲಾ ಗ್ರಾಮಗಳಲ್ಲಿ ODF Board ಹಾಕುವುದು, ಶಾಲಾ ಮಕ್ಕಳಿಂದ ಜಾಥಾ, ಸ್ವಚ್ಛತಾ ಪ್ರತಿಜ್ಞಾ ವಿಧಿ ಸ್ವೀಕಾರ, ಸ್ವಚ್ಛತೆಗಾಗಿ ಶ್ರಮದಾನ, ಪ್ರಬಂಧ ಸ್ಪರ್ಧೆ, ತರಬೇತಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಇತ್ಯಾದಿಗಳನ್ನು ಮಾಡಬೇಕು.
- Mobile Demonstration Unit (ಸ್ವಚ್ಛತಾ ರಥ) ಚಾಲನೆಗೊಳಿಸಿ, ಇದಕ್ಕೆ GPS Tracker ಅಳವಡಿಸಬೇಕು.
- IEC ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಸೂತ್ರಗಳು ಮತ್ತು ಶೀರ್ಷಿಕೆಗಳನ್ನು ಪರಿಣಾಮಕಾರಿ ಪ್ರಚಾರ/ಆಂದೋಲನ ಸಲುವಾಗಿ ಘನ ತ್ಯಾಜ್ಯ ವಿಲೇವಾರಿ ಕಾರ್ಯಕ್ರಮ ಅನುಷ್ಠಾನ ಸಂಬಂಧ ಆಯ್ದ 1000 ಗ್ರಾಮ ಪಂಚಾಯತಿಗಳಲ್ಲಿ ಘೋಷಣೆ/ಪ್ರಕಟಣೆ/ಸೂಚನೆಗಳನ್ನು ಬಿತ್ತರಿಸಲು ಮಾದರಿ ನಕ್ಷೆ ಮತ್ತು ನಮೂನೆಗಳನ್ನು ಕಳುಹಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ Tender ಕರೆದು Social Media ಪ್ರಕಟಣೆ ಸಲುವಾಗಿ ಕ್ರಮವಹಿಸುವುದು.
- ದಿನಾಂಕ:06/06/2019ರಂದು ವಿಶ್ವಪರಿಸರ ಆಂದೋಲನಕ್ಕೆ ಪೂರಕವಾಗಿ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಮತ್ತು ಶಿಕ್ಷಣ ಇಲಾಖೆ ಸಮನ್ವಯದಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕನಿಷ್ಠ 100ರಿಂದ 1000ವರೆಗೆ ಪರಿಸರ ಸಂರಕ್ಷಣೆ ಮತ್ತು ದೈನಂದಿನ ಫಲ–ಪುಷ್ಪ ಬೇಡಿಕೆಗೆ ಪೂರಕವಾಗುವ ಸಸಿಗಳನ್ನು (ಮಾವು, ಬೇವು, ನೇರಳೆ, ಶ್ರೀಗಂಧ, ಸಂಪಿಗೆ, ಸೀಬೆ,

ಹಲಸಿನ ಹಣ್ಣು, ಸಪೋಟಾ, ಹೊಂಗೆ, ಆಲದಮರ ಇತ್ಯಾದಿ) ನೆಡುವ ಕಾರ್ಯಕ್ರಮ ಆಯೋಜಿಸಿಕೊಳ್ಳಬೇಕು. ಏಕ ಕಾಲದಲ್ಲಿ ರಾಜ್ಯದ 6020 ಗ್ರಾಮ ಪಂಚಾಯತಿಗಳಲ್ಲಿ ದಿನಾಂಕ:06/06/2019ರಂದು ಪೂರ್ವಾಹ್ನ 9:00AM–10:00AM ನಲ್ಲಿ ಈ ಕಾರ್ಯಕ್ರಮ ನಡೆದು ಫಲಪ್ರದವಾಗಬೇಕು.

- ಬಳ್ಳಾರಿ ಮತ್ತು ಬೆಂಗಳೂರು(ನಗರ) ಜಿಲ್ಲೆಗಳು 2015–16ನೇ ಸಾಲಿನ ವರದಿಗೆ ಹಾಗೂ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳು 2015–16 ಮತ್ತು 2016–17 ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಆಕ್ಷೇಪಣೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವುದು.

(ಕ್ರಮ: ಆಯುಕ್ತರು ಗ್ರಾನೀಸ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)

**MGNREGA–ಜಲಾಮೃತ ಯೋಜನೆ:**

- MI Tanks ಮತ್ತು ಗ್ರಾಮ ಪಂಚಾಯತಿ ಮಟ್ಟದ ಸಣ್ಣ ಕೆರೆಗಳನ್ನು ತುಂಬಿಸಲು NGOs/CSRನಿಂದ ಸಂಪನ್ಮೂಲ ಸಂಗ್ರಹಣೆ ಹಾಗೂ ಅನುಷ್ಠಾನ ಮಾಡಿಸುವ ಕುರಿತು ಅಗತ್ಯ ಕ್ರಮವಹಿಸಬೇಕು.
- KSCST(IISc) ಬೆಂಗಳೂರು ರವರು ಮತ್ತು Karnataka Remote Sensing ಸಂಸ್ಥೆ ಜಲಬಿಂಧುಗಳಿಗೆ ಸಂಬಂಧಿಸಿದಂತೆ ನೀಡಿರುವ Latitude ಮತ್ತು Longitude ವಿವರವನ್ನೊಳಗೊಂಡಿರುವ ನಕ್ಷೆ ಆಧರಿಸಿ ಜಲಸಂರಕ್ಷಣೆ/ಜಲಮರುಪೂರಣ ಕ್ರಿಯಾಯೋಜನೆ ತಯಾರಿಸಲು ಕ್ರಮವಹಿಸಬೇಕು.
- 'ಜಲಾಮೃತ' ಯೋಜನೆಯಡಿ ಜಲ ಸಾಕ್ಷರತೆ, ನೀರಿನ ಪ್ರಜ್ಞಾವಂತ ಬಳಕೆ, ಜಲ ಮೂಲಗಳ ಪುನರುಜ್ಜೀವನ ಹಾಗೂ ನಿರ್ಮಾಣ ಮತ್ತು ಹಸಿರೀಕರಣ, ಇವುಗಳಿಗೆ ಪೂರಕವಾಗಿ ಕಾಮಗಾರಿಗಳನ್ನು ನರೇಗಾದಡಿ Convergence ಮಾಡಿ ಅನುಷ್ಠಾನಗೊಳಿಸಲು "ಜಲಾಮೃತ ಯೋಜನೆಯಡಿ" ಯಂತ್ರೋಪಕರಣಗಳನ್ನು ಬಳಸಲು (No lead and Lift Charges) ಅವಕಾಶವಿದೆ.
- Canal Cleaning, Jungle Clearence ಮತ್ತು ನೀರಿನ ಸರಾಗ ಹರಿವಿಗೆ ಪೂರಕವಾಗಿ ಕಾಲುವೆಗಳನ್ನು ನಿರ್ಮಾಣ ಮಾಡಲು ನರೇಗಾ ಅನುದಾನ ಬಳಸಬೇಕು.
- 2019ನೇ ವರ್ಷವನ್ನು 'ಜಲವರ್ಷ'ವನ್ನಾಗಿ ಪರಿಗಣಿಸಿದ್ದು, **ಜಲಾಮೃತ** ಯೋಜನೆಯನ್ನು ರಾಜ್ಯದ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಈಗಾಗಲೇ KSCST/KSRSACಯಿಂದ ನೀಡಿರುವ ಕಲ್ಯಾಣಿ, ಕುಂಟೆ, ಗೋಕಟ್ಟೆ ಮತ್ತು ಕಟ್ಟೆ ಇತ್ಯಾದಿ ಸಾಂಪ್ರದಾಯಿಕ ನೀರು ಸಂಗ್ರಹಣಾ ಸ್ಥಳಗಳ ಪುನರುಜ್ಜೀವನ ಕುರಿತಂತೆ, ಜಲಾಮೃತ ಯೋಜನಾ ಅನುಷ್ಠಾನ ಸಮಿತಿ ಅನುಮೋದನೆ ಪಡೆದು ಕ್ರಮ ಕೈಗೊಳ್ಳಬೇಕು.

- 2019-20ರ ಸಾಲಿನ ನರೇಗಾ ಪ್ರಗತಿ ಪರಿಶೀಲಿಸಿ, ಕಡಿಮೆ ಪ್ರಗತಿ ಸಾಧಿಸಿದ ರಾಯಚೂರು, ಚಿತ್ರದುರ್ಗ, ಉಡುಪಿ, ಕೊಡಗು, ಬೆಂಗಳೂರು, ಮೈಸೂರು, ದಾವಣಗೆರೆ, ರಾಮನಗರ, ಕೋಲಾರ ಮತ್ತು ಬೀದರ್ ಜಿಲ್ಲೆಗಳ ಪ್ರಗತಿ ತೀವ್ರಗೊಳಿಸಲು ಸೂಚಿಸಲಾಯಿತು.
- ತಲಾ ಆದಾಯ ಹೆಚ್ಚಿರುವ ಜಿಲ್ಲೆಗಳಲ್ಲಿ ವೈಯಕ್ತಿಕ ಫಲಾನುಭವಿಗಳ ಕಾಮಗಾರಿಗಳನ್ನು ಹೆಚ್ಚಾಗಿ ಅಳವಡಿಸಲು ಮತ್ತು ತಲಾ ಆದಾಯ ಕಡಿಮೆ ಇರುವ ಜಿಲ್ಲೆಗಳಲ್ಲಿ ಸಾರ್ವಜನಿಕ ಮತ್ತು ಸಮುದಾಯ ಆಧಾರಿತ ಕಾಮಗಾರಿಗಳನ್ನು ಅಳವಡಿಸಲು ಕ್ರಮವಹಿಸಬೇಕು.
- ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ರೂ.1ಕೋಟಿ ಮೊತ್ತದ ಕಾರ್ಯಸಿಂಧುತ್ವವಿರುವ ಮತ್ತು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುವ ಕಾಮಗಾರಿಗಳನ್ನು (ವಸತಿ, Compost Pits, ಶಾಲಾ ಕಾಂಪೌಂಡ್, Metalling of Roads, Drainages, ಕೊಳೆ/ಮಳೆ ನೀರಿನ ಚರಂಡಿ ಕಾಮಗಾರಿಗಳು ಹಾಗೂ ಶಾಲೆಗಳಲ್ಲಿನ ಕೈದೋಟಗಳನ್ನು ಅಳವಡಿಸಲು ಕ್ರಮವಹಿಸಬೇಕು.

(ಕ್ರಮ: ಆಯುಕ್ತರು ನರೇಗಾ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)

ಗ್ರಾಮೀಣ ಮೂಲಸೌಕರ್ಯ:

- ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ 2019-20ರ ಸಾಲಿಗೆ ಕ್ರಿಯಾ ಯೋಜನೆಯನ್ನು ಜಾಗ್ರತೆಯಾಗಿ ಸಿದ್ಧಪಡಿಸಿ (ಈಗಾಗಲೇ ಹಿಂದಿನ ಸಭಾ ನಡವಳಿಗಳಲ್ಲಿ ತಿಳಿಸಿರುವಂತೆ) ಸರ್ಕಾರದ ಅನುಮೋದನೆಗೆ ಕಳುಹಿಸಬೇಕು.
- SDP ಮತ್ತು NABARDನಡಿ ಪ್ರಸ್ತಾಪಿಸಿರುವ ಯೋಜನಾ ಕಾಮಗಾರಿಗಳನ್ನು ಸಹ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ ಭೌತಿಕ ಮತ್ತು ಆರ್ಥಿಕ ಗುರಿ 100% ಆಗುವಂತೆ ನೋಡಿಕೊಳ್ಳತಕ್ಕದ್ದು.
- ವಿಧಾನಸಭಾ ಕ್ಷೇತ್ರಾವಾರು 31ನೇ ಮಾರ್ಚ್ 2019ರೊಳಗೆ ಹೊರಡಿಸಿರುವ ಆಡಳಿತಾತ್ಮಕ ಆದೇಶಗಳಿಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಮತ್ತು ಅನುದಾನ ವಿನಿಯೋಗದ ವಿವರಗಳನ್ನು ಸಮರ್ಪಕವಾಗಿ ದಾಖಲಿಸಬೇಕು.
- 3054ರಡಿ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆಯುವುದು ಮತ್ತು ಅವಕಾಶವಿರುವೆಡೆಯಲ್ಲೆಲ್ಲಾ ನರೇಗಾ ಯೋಜನೆಯೊಂದಿಗೆ convergence (ಒಗ್ಗೂಡಿಸುವಿಕೆ) ಮಾಡುವುದು.

(ಕ್ರಮ: ನಿರ್ದೇಶಕರು ಗ್ರಾಮವಿಕಾಸ, CE, PRED, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)

ಪಂಚಾಯತ್ ರಾಜ್ ವಿಷಯಗಳು:

- PriaSoftನಡಿ 5794 ಗ್ರಾಮ ಪಂಚಾಯತಿಗಳು ಮಾತ್ರ ವಿವರಗಳನ್ನು ದಾಖಲಿಸಿದ್ದು, ಉಳಿದ ಗ್ರಾಮ ಪಂಚಾಯತಿಗಳು ಜಾಗ್ರತೆಯಾಗಿ ದಿನಾಂಕ:30/04/2019ರೊಳಗೆ ವಿವರಗಳನ್ನು ದಾಖಲಿಸಬೇಕು.
- 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಕುಡಿಯುವ ನೀರಿನ ಬಾಬ್ತಿನ ಕಾಮಗಾರಿಗಳು ಮತ್ತು ನಿರ್ವಹಣೆಗೆ ಮೊದಲ ಆದ್ಯತೆ ನೀಡಬೇಕು.
- BSNL ಸಂಸ್ಥೆಗೆ ಬಾಕಿ ಪಾವತಿ ಮಾಡಬೇಕಾಗಿರುವ 1000 ಗ್ರಾಮ ಪಂಚಾಯತ್‌ಗಳು ತಕ್ಷಣ ಕ್ರಮವಹಿಸಬೇಕು.
- ವಿದ್ಯುತ್ ಬಿಲ್ ಬಾಕಿ ಬಾಬ್ತು ESCROW Account ಪಾವತಿಗಳನ್ನು ಕ್ರಮಬದ್ಧವಾಗಿ ಮಾಡಿ ESCOMಗಳೊಂದಿಗೆ ಸಮನ್ವಯ ಸಾಧಿಸಬೇಕು.
- ಪ್ರತಿ ಗ್ರಾಮ ಪಂಚಾಯತಿಯಲ್ಲಿ 10-15 RR Numberಗಳು ಮಾತ್ರ ಇದ್ದು, ಇವುಗಳ Metering ವ್ಯವಸ್ಥೆ ಮತ್ತು ಬಾಕಿ ಬಿಲ್ ಪಾವತಿ ಕುರಿತು PDOಗಳು ಗಂಭೀರವಾಗಿ ಪರಿಗಣಿಸಬೇಕು. ಇದನ್ನು EOಗಳು ಕಾಲಕಾಲಿಕ ಪರಿವೀಕ್ಷಣೆ ಮೂಲಕ Update ಮಾಡಿಸಬೇಕು. ಒಂದು ಪಂಚಾಯತಿಯಿಂದ ಮತ್ತೊಂದು ಪಂಚಾಯತಿಗೆ ಪಾವತಿ ವ್ಯಾಪ್ತಿಯಲ್ಲಿ ವಿದ್ಯುತ್ ಪಾವತಿ ಕುರಿತಂತೆ ಮತ್ತು ತಾಲ್ಲೂಕುವಾರು ಸಹಜವಾಗಿ ವಿಧಿಸಲಾಗುತ್ತಿರುವ ಮತ್ತು ಭರಿಸಲಾಗುತ್ತಿರುವ ವೆಚ್ಚದ ವಿವರಗಳನ್ನು CEO, ZP ಪರಿಶೀಲಿಸಿ ಆರ್ಥಿಕ ಶಿಸ್ತು ಮತ್ತು ಬದ್ಧತೆಯನ್ನು ಖಾತ್ರಿಪಡಿಸಬೇಕು.
- GPDPಯಡಿ ದಾಖಲಿಸುವ ವಿವರಗಳು ಮತ್ತು ಬೇಡಿಕೆಗಳಿಗೆ ಸಂಬಂಧಿಸಿದಂತೆ ಮಾತ್ರ ಕೇಂದ್ರದಿಂದ ಸಂಪೂರ್ಣ ಅನುದಾನ ಪಡೆಯಲು ಅವಕಾಶವಿದೆ. ಇದರಿಂದ ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು ಅವಕಾಶವಾಗಲಿದೆ ಮತ್ತು ಪ್ರಗತಿ ಪರಿಶೀಲನೆಗೆ ಇದು ಆಧಾರವಾಗಿರುತ್ತದೆ. ಆದುದರಿಂದ ಇದರಲ್ಲಿ ಶಿಸ್ತುಬದ್ಧತೆ ಇರತಕ್ಕದ್ದು.
- GPDP Plan Plus 100% ದಾಖಲೆ ಪ್ರತಿಬಿಂಬಿಸಬೇಕು.
- ತೆರಿಗೆ ಸಂಗ್ರಹಣೆ/ವಸೂಲಿ 2019-20ರ ಸಾಲಿಗೆ 95% ಆಗುವಂತೆ ನೋಡಿಕೊಳ್ಳಬೇಕು.
- ತೆರಿಗೆ ವಸೂಲಿ ಮತ್ತಿತರೆ ಪಂಚಾಯತಿ ರಾಜ್ ವ್ಯವಸ್ಥೆಯಡಿ ಸುಧಾರಣೆ ಸಲುವಾಗಿ ಸಭಾಸೂಚನಾ ಟಿಪ್ಪಣಿಯೊಂದಿಗೆ ನೀಡಿರುವ ಮಾರ್ಗಸೂಚಿಗಳು ಸವಿಸ್ತಾರವಾಗಿದ್ದು, ಅದರಂತೆ ಜಿಲ್ಲಾ ಪಂಚಾಯತಿಗಳು ಕಾರ್ಯೋನ್ಮುಖರಾಗತಕ್ಕದ್ದು.
- ಜಿಲ್ಲಾ ಮತ್ತು ತಾಲ್ಲೂಕು ಯೋಜನೆ ಹಾಗೂ ಅಭಿವೃದ್ಧಿ ಸಮಿತಿಗಳನ್ನು ರಚಿಸಿ, ಕಾಲಕಾಲಿಕ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಿ, ಅದರ ನಡವಳಿಗಳನ್ನು ಪಂಚತಂತ್ರ ವ್ಯವಸ್ಥೆಯಡಿ Upload ಮಾಡಬೇಕು.

- Onlineನಲ್ಲಿ DSS ಮಾಹಿತಿಯನ್ನು ಇನ್ನುಮುಂದೆ ಜಿಲ್ಲಾ ಮತ್ತು ರಾಜ್ಯ ವಲಯದ ಎಲ್ಲಾ ಯೋಜನೆಗಳಿಗೂ ಜಿಲ್ಲಾಮಟ್ಟದ ಅನುಷ್ಠಾನಾಧಿಕಾರಿಗಳೇ ಮಾಡತಕ್ಕದ್ದು. ಹೀಗಾದಲ್ಲಿ ಮಾತ್ರ ಅನುದಾನ ಬಳಕೆ ಮತ್ತು ವಿನಿಯೋಗ ಖಚಿತವಾಗಲಿದೆ.
- ಎಲ್ಲಾ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು ಪಂಚತಂತ್ರ ವ್ಯವಸ್ಥೆ, IMIS ವ್ಯವಸ್ಥೆ ಮತ್ತು ಗಾಂಧಿಸಾಕ್ಷಿ (GSK) ಕಾಯಕದಡಿ ಪಾರದರ್ಶಕವಾಗಿ ತಾಳೆಯಾಗತಕ್ಕದ್ದು. ಇದನ್ನು ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ರಾಜ್ಯಮಟ್ಟದಲ್ಲಿ ಆ ಕಾರ್ಯಕ್ರಮದ ಮುಖ್ಯಸ್ಥರುಗಳು ಪ್ರತಿನಿತ್ಯ/ವಾರ ಮತ್ತು ತಿಂಗಳು ಪರಿಶೀಲಿಸಬೇಕು/ಅವಲೋಕಿಸಬೇಕು.
- ಅನುಮೋದಿತ ಯೋಜನೆಗಳ ಬಾಬ್ತಿನ ಪಾವತಿಗಳನ್ನು PriyaSoft (14th FCG) ನಲ್ಲಿ 100% ದಾಖಲೆಯಾಗುವಂತೆ ನೋಡಿಕೊಳ್ಳತಕ್ಕದ್ದು.
- PriaSoftನಲ್ಲಿ ಕಾಮಗಾರಿ ಮತ್ತು ಪ್ರಗತಿ ಅಲ್ಲದೆ, ಗ್ರಾಮ ಪಂಚಾಯತಿಯ ಆಸ್ತಿಯ ವಿವರಗಳ ಛಾಯೆಯನ್ನು ಸಹ ದಾಖಲಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಪಂಚಾಯತಿವಾರು ಮತ್ತು ಜಿಲ್ಲಾ ಪಂಚಾಯತಿವಯಿ District Profile (Local Government Directory) ನಿರ್ವಹಣೆ ಮಾಡಬೇಕು ಹಾಗೂ ತಪಾಸಣೆ ಕಾಲದಲ್ಲಿ ಅವುಗಳನ್ನು ಹಾಜರುಪಡಿಸಬೇಕು.
- ActionSoftನಡಿ 14th FCG Geotag ಪ್ರಕ್ರಿಯೆಯನ್ನು ಮೊದಲ ಆದ್ಯತೆಯಲ್ಲಿ ಪೂರ್ಣಗೊಳಿಸಬೇಕು.
- E-Office ಪ್ರಕ್ರಿಯೆಗಳನ್ನು ಈಗಾಗಲೇ ಸರ್ಕಾರದಿಂದ ತಿಳಿಸಿರುವ ಮಾದರಿಯಲ್ಲಿ ಅನುಷ್ಠಾನಗೊಳಿಸಿ, ಅದರ ಧ್ಯೇಯೋದ್ದೇಶಗಳು ಸಫಲವಾಗುವಂತೆ ನೋಡಿಕೊಳ್ಳತಕ್ಕದ್ದು. ಈ ವ್ಯವಸ್ಥೆಯಿಂದ ದಾಖಲೆಗಳ Digitisation ಆಗಿ ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ ಮತ್ತು ಪಾರದರ್ಶಕತೆ ತರಬಹುದಾಗಿದೆ. Assets Mapping ಮಾಡುವ ಮೂಲಕ ವಿವಿಧ ಕಾರ್ಯಕ್ರಮಗಳಡಿ ಕಾಮಗಾರಿಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ಸಹ ಅನುಕೂಲವಾಗಲಿದೆ. ಕಾಲಮಿತಿಯೊಳಗೆ ನಿರೀಕ್ಷಿತ ಮಾಹಿತಿ ಮತ್ತು ವರದಿಯನ್ನು ಪಡೆದುಕೊಳ್ಳಲು ಸರ್ಕಾರಕ್ಕೆ ಹಾಗೂ ಜಿಲ್ಲಾ ಪಂಚಾಯತಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ.

**(ಕ್ರಮ: ನಿರ್ದೇಶಕರು PR-I, PR-II, ಇ–ಆಡಳಿತ & ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)**

- ನಿರ್ದೇಶಕರು RI-IIರವರು ಜೀತ ನಿರ್ಮೂಲನಾ ಪದ್ಧತಿ ಸಂಬಂಧ ಕಾಲಮಿತಿಯೊಳಗೆ SHRC/NHRC ಮತ್ತು ನ್ಯಾಯಾಲಯಗಳ ಆದೇಶಗಳನ್ನು ಉಲ್ಲೇಖಿಸಿ, ಕಾಲಮಿತಿಯೊಳಗೆ ನಿಯಮಾನುಸಾರ ಪರಿಹಾರ ಒದಗಿಸಲು, ಜೀತಮುಕ್ತರನ್ನಾಗಿಸಲು ಆದ್ಯತೆ ನೀಡುವಂತೆ ತಿಳಿಸಿದ ರೀತ್ಯ ಕ್ರಮವಹಿಸಬೇಕು.
- ಜೈವಾನಿಲ ಕಾರ್ಯಕ್ರಮದಡಿ ಅನುದಾನ ವಿನಿಯೋಗದ UCಗಳನ್ನು ಮತ್ತು DRDA UCಗಳನ್ನು ನಿಗದಿತ ಪ್ರಪತ್ರದಲ್ಲಿ ಸಲ್ಲಿಸಬೇಕು ಹಾಗೂ ಪ್ರಸಕ್ತ ಸಾಲಿಗೆ ನೀಡಿರುವ ಜೈವಾನಿಲ ಸ್ಥಾವರಗಳ ಗುರಿ 7000 (Tentative) 100% ಸಾಧಿಸಿ, ಗ್ರಾಮೀಣ ಭಾಗದಲ್ಲಿ ಈ ಯೋಜನೆ ಫಲಪ್ರದವಾಗುವಂತೆ ನೋಡಿಕೊಳ್ಳತಕ್ಕದ್ದು.

(ಕ್ರಮ: ನಿರ್ದೇಶಕರು ಗ್ರಾಮೂಸೌ-II & ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತಿ ರಾಜ್) ಈಗಾಗಲೇ ಪ್ರಗತಿ ಪರಿಶೀಲನೆ ವೇಳೆ ನೀಡಿರುವ ಸಲಹೆ ಮತ್ತು ನಿರ್ದೇಶನಗಳನ್ನು ಆದ್ಯತೆ ಮೇಲೆ ಪಾಲಿಸಿ, ಅನುಪಾಲನೆಯನ್ನು ಪ್ರತಿಬಿಂಬಿಸುವಂತೆ ತಿಳಿಸಿದರು. ಇದಲ್ಲದೆ, ನಿರೀಕ್ಷಿತ ಪ್ರಗತಿ ಕಂಡುಬರದಿದ್ದಲ್ಲಿ ಮೇ-2019ನೇ ತಿಂಗಳಿನಲ್ಲಿ ಪಂಚಾಯತಿ ರಾಜ್ ಬಾಬ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವಿಡಿಯೋ ಸಂವಾದ/ಸಭೆ ನಡೆಸುವುದಾಗಿ ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಕುಡಿಯುವ ನೀರು, ನರೇಗಾ ಕಾರ್ಯಕ್ರಮದಡಿ ಮತ್ತು ಜಲಾಮೃತ ಕಾರ್ಯಕ್ರಮ ಅನುಷ್ಠಾನ ಸಂಬಂಧ ನೀಡಿರುವ ನಿರ್ದೇಶನಗಳನ್ನು ಪಾಲಿಸಿ, ಅನುಪಾಲನೆ ನೀಡಲು ತಿಳಿಸಿದರು. ನಿಗದಿತ ಸಮಯದಲ್ಲಿ 2019-20ರ ಸಾಲಿನ ಕ್ರಿಯಾ ಯೋಜನೆಗಳಿಗೆ ಅನುಮೋದನೆ ದೊರಕಿಸಿಕೊಡುವುದು CEO,ZP, ಮುಖ್ಯ ಇಂಜಿನೀಯರುಗಳು, ಸಂಬಂಧಿಸಿದ ಆಯುಕ್ತರು ಮತ್ತು ನಿರ್ದೇಶಕರುಗಳ ಜವಾಬ್ದಾರಿಯಾಗಿರುತ್ತದೆ. ಇದರಲ್ಲಿ ಯಾವುದೇ ಉದಾಸೀನವಾಗಬಾರದೆಂದು ತಿಳಿಸಿದರು.

**(ಕ್ರಮ: ಆಯುಕ್ತರು ಗ್ರಾನೀಸ, ನರೇಗಾ & ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ.ಗಳು)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಲ್.ಕೆ.ಅತೀಕ್)
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಸಂಖ್ಯೆ:ಗ್ರಾಅಪ/37/ಯೋಉಮಾ/2019** **ದಿನಾಂಕ:06/05/2019**

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಬೆಂಗಳೂರು.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ. ಬೆಂಗಳೂರು.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್, ಖನಿಜಭವನ, ಬೆಂಗಳೂರು.
5. ನಿರ್ದೇಶಕರು, ಪಂಚಾಯತ್ ರಾಜ್- 1/ಪಂಚಾಯತ್ ರಾಜ್-2/ಸ್ವ.ಉ.ಕಾ/ಗ್ರಾಮ ವಿಕಾಸ/ಯೋಉಮಾ/ಇ-ಆಡಳಿತ/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ ರಾಜ್ ಇಲಾಖೆ, ಬೆಂಗಳೂರು.
6. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಕನ್ನಿಂಗ್‌ಹ್ಯಾಂ ರಸ್ತೆ, MSIL Building, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.

9. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
12. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ, ಬೆಂಗಳೂರು.
13. ಎಲ್ಲಾ ಅಧೀಕ್ಷಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು, ಗ್ರಾನೀಸ ಮತ್ತು PRED.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.